**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಗುಂಡ್ಲುಪೇಟೆ**

**ಸಿ.ಸಿ. ಸಂಖ್ಯೆ: 755/2025**

ಫ್ರಾಸಾ – 4

ಚಾಸಾ – 4

**ಸಾಕ್ಷಿಯು ದಿಃ 12.12.2025 ರಂದು ನ್ಯಾಯಾಲಯದಲ್ಲಿ ಹಾಜರಿದ್ದು ಪ್ರಮಾಣ ವಚನ ಭೋಧಿಸಲಾಯಿತು.**

| | | |
|---|---|---|
| ಹೆಸರು | : | ಸುಬ್ಬಣ್ಣ |
| ತಂದೆಯ ಹೆಸರು | : | ಲಿಂಗಪ್ಪ |
| ವಯಸ್ಸು | : | 81 ವರ್ಷ |
| ವೃತ್ತಿ | : | ವ್ಯವಸಾಯ |
| ವಾಸಸ್ಥಳ | : | ಕಂದೇಗಾಲಹೊಸುರು |

**ಮುಖ್ಯ ವಿಚಾರಣೆ :ಮಾನ್ಯ ಎಪಿಪಿಯವರಿಂದ :–**

ಚಾಸಾ 1 ನನ್ನ ಹೆಂಡತಿ. ಚಾಸಾ 2, 3 ಮತ್ತು 5 ಗೊತ್ತು. ಆರೋಪಿಗಳು ಗೊತ್ತು, ನಮ್ಮೂರಿನವರು. ಆರೋಪಿಗಳ ಮನೆ ಮತ್ತು ನಮ್ಮ ಮನೆ ಅಕ್ಕಪಕ್ಕದಲ್ಲಿ ಇರುತ್ತದೆ. 2021ನೇ ಇಸವಿಯಲ್ಲಿ ಸಂಜೆ 6.00 ಗಂಟೆ ಸಮಯದಲ್ಲಿ ನಮ್ಮ ಜಾಗದಲ್ಲಿ ನಮ್ಮನ್ನು ಕಸ ಹಾಕಬೇಡಿ ಎಂದು ಆರೋಪಿಗಳು ಹೇಳಿದ್ದು, ಚಾಸಾ 1 ರವರಿಗೆ ಸೂಳೆ ಮುಂಡೆ ಎಂದು ಅವಾಚ್ಯ ಶಬ್ಧಗಳಿಂದ ಬೈದು, 1ನೇ ಆರೋಪಿಯು ದೊಣ್ಣೆಯಿಂದ ಚಾಸಾ 1 ರವರಿಗೆ ಹೊಡೆದಿದ್ದು, ಅದೇ ದೊಣ್ಣೆಯಿಂದ 2ನೇ ಆರೋಪಿಯು ಚಾಸಾ 1 ರವರಿಗೆ ಹೊಡೆದಿರುತ್ತಾರೆ. ಆಗ ಚಾಸಾ 1 ರವರು ಕೂಗಿಕೊಂಡಾಗ ನಾನು ಮತ್ತು ಊರಿನವರು ಹೋಗಿ ಜಗಳ ಬಿಡಿಸಿರುತ್ತೇವೆ. ಆರೋಪಿಗಳು ಚಾಸಾ 1 ರವರನ್ನು ಸಾಯಿಸುತ್ತೇನೆ ಎಂದು ಬೆದರಿಕೆ ಹಾಕಿರುತ್ತಾರೆ. ನಂತರ ನಾನು ಚಾಸಾ 1 ರವರನ್ನು ಗುಂಡ್ಲುಪೇಟೆ ಪೊಲೀಸ್ ಠಾಣೆಗೆ ಹೋಗಿದ್ದು ಪೊಲೀಸರು ಆಸ್ಪತ್ರೆಗೆ ಹೋಗಿ ಬನ್ನಿ ಎಂದು ತಿಳಿಸಿದ ಮೇರೆಗೆ ಆಸ್ಪತ್ರೆಗೆ

ಹೋಗಿ ಬಂದು ನಂತರ ಪೋಲಿಸರಿಗೆ ದೂರು ನೀಡಿರುತ್ತಾರೆ. ದೂರು ನೀಡಿದ 4–5 ದಿನಗಳ ನಂತರ ಪೊಲೀಸರು ಗಲಾಟೆಯಾದ ಸ್ಥಳಕ್ಕೆ ಬಂದಿದ್ದು, ನಾನು ತೋರಿಸಿದ ಸ್ಥಳದಲ್ಲಿ ಚಾಸಾ 2 ಮತ್ತು 3 ರವರ ಸಮಕ್ಷಮ ಬೆಳಿಗ್ಗೆ 11.30 ರಿಂದ 12.00 ಗಂಟೆಯ ವರೆಗೆ ಸ್ಥಳ ಪಂಚನಾಮೆ ಜರುಗಿಸಿ, ಮುದ್ದೆ ಮಾಲು 1 ದೊಣ್ಣೆಯನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ನಿಪಿ 2 ಪಂಚನಾಮೆಯಲ್ಲಿ ಸಾಕ್ಷಿ ತಮ್ಮ ಸಹಿ ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ 2(ಸಿ) ಎಂದು ಗುರ್ತಿಸಲಾಯಿತು.

**ಪಾಟೀ ಸವಾಲು :– ಆರೋಪಿಗಳ ಪರ ವಕೀಲರಿಂದ**

ನಮ್ಮ ಮನೆಯ ಜಾಗದ ಅಸ್ಸೆಸ್ಮೆಂಟ್ ನಂಬರ್ ಹೇಳಲಾಗುವುದಿಲ್ಲ. ನಮ್ಮ ಮನೆಯ ಪಕ್ಕದಲ್ಲಿ 1ನೇ ಆರೋಪಿಗೆ ಸೇರಿದ ಖಾಲಿ ಜಾಗ ಇದೆ ಎಂದರೆ ಸರಿ. ಗಲಾಟೆಯಾಗಿದೆ ಎನ್ನುವ ದಿನ 1ನೇ ಆರೋಪಿಯು ಅವರ ಜಾಗದಲ್ಲಿ ದನ ಕಟ್ಟುವ ಶೆಡ್ ಹಾಕುತ್ತಿದ್ದರು ಎಂದರೆ ಸಾಕ್ಷಿಯು ಅವರ ಜಾಗದಲ್ಲಿ ಮಾತ್ರ ಹಾಕಿಕೊಳ್ಳಬೇಕು, ಅದಕ್ಕಿಂತ ಜಾಸ್ತಿ ಹಾಕಿಕೊಳ್ಳಬಾರದಲ್ಲವಾ ಎಂದು ಎಂದು ನುಡಿಯುತ್ತಾರೆ. ನಿಮ್ಮ ಜಾಗವನ್ನು ಅಳತೆ ಮಾಡಿಸಿಕೊಂಡಿದ್ದೀರಾ ಎಂದರೆ ಸಾಕ್ಷಿಯು ಅಳತೆ ಮಾಡಿಸಲು ಆರೋಪಿಗಳು ಬಿಟ್ಟಿಲ್ಲ ಎಂದು ನುಡಿಯುತ್ತಾರೆ. ಅಳತೆ ಮಾಡಿಸಲು ಪ್ರಯತ್ನಿಸಿದ ಬಗ್ಗೆ ದಾಖಲೆಗಳನ್ನು ಪೊಲೀಸರಿಗೆ ನೀಡಿಲ್ಲ. ಗಲಾಟೆಯಾದ ದಿನ ನಾನು ಮನೆಯಲ್ಲಿಯೇ ಇದ್ದೆ. ಗಲಾಟೆಯು ಸಂಜೆ 6.00 ಗಂಟೆ ಸಮಯದಲ್ಲಿ ನಡೆದಿರುತ್ತದೆ. ಸುಮಾರು 3–4 ವರ್ಷಗಳಾಗಿರುವುದರಿಂದ ನಿಖರ ದಿನಾಂಕ ಹೇಳಲಾಗುವುದಿಲ್ಲ. ಗಲಾಟೆಯಾಗಿದೆ ಎನ್ನಲಾದ ಸಮಯದಲ್ಲಿ ಸಾರ್ವಜನಿಕರು ಇದ್ದರು. ಆ ದಿನ ಗಲಾಟೆಯಾಗಿದ್ದರೆ ಸಾರ್ವಜನಿಕರು ಬಂದು ನನ್ನ ಪರವಾಗಿ ಸಾಕ್ಷಿ ನುಡಿಯುತ್ತಿದ್ದರು ಎಂದರೆ ಸರಿಯಲ್ಲ. ಮುದ್ದೆ ಮಾಲು 1 ರೀತಿಯ ದೊಣ್ಣೆಗಳು ಎಲ್ಲರ ಮನೆಯಲ್ಲಿ ಬಂಡಿಗಾಡಿ ಗೂಟಗಳಾಗಿ ಬಳಸುತ್ತಾರೆ ಎಂದರೆ ಸರಿ. ನಾನು ಹೇಳುವಂತೆ ಆರೋಪಿಗಳು ಚಾಸಾ 1 ರವರಿಗೆ ಬೈದು ಹಲ್ಲೆ ಮಾಡಿಲ್ಲ ಮತ್ತು ಜೀವ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ಪಂಚನಾಮೆಗೆ ಪೊಲೀಸರು ಗಲಾಟೆಯಾದ 4–5 ದಿನಗಳಿಗೆ ಬಂದಿದ್ದರು, ನಿಖರವಾದ ದಿನಾಂಕ ನೆನಪಿಲ್ಲ. ಪೊಲೀಸರು ಸ್ಥಳಕ್ಕೆ ಬಂದಿಲ್ಲ ಮತ್ತು ಸ್ಥಳದಲ್ಲಿ ಪಂಚನಾಮೆ ಮಾಡಿಲ್ಲ ಹಾಗೂ

ಪಂಚನಾಮೆ ಸಾಕ್ಷಿಗಳ ಸಮಕ್ಷಮ ಪಂಚನಾಮೆ ಜರುಗಿಸಿ ಮುದ್ದೆ ಮಾಲು 1ನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಚಾಸಾ 1 ರವರಿಗೆ ಯಾವುದೇ ಹಲ್ಲೆಯಾಗಿಲ್ಲ ಮತ್ತು ಅವರು ಚಿಕಿತ್ಸೆ ಪಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿಗಳ ಮೇಲಿನ ದ್ವೇಷದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ದೀಪು ಎಂ.ಟಿ.)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಗುಂಡ್ಲುಪೇಟೆ